ಬದುಕುವ ಆತ್ಮವಿಶ್ವಾಸವನ್ನು ಮಾರೆಮ್ಮ ಆಗಾಗ ಹೊರಗಾಕುತ್ತಿದ್ದಳು. ತನ್ನ ಗುಡಿಯ ಸುತ್ತಾ ಒಮ್ಮೆ ಕಣ್ಣಾಡಿಸಿದಳು. ಕ್ಷಣ ಭಾವುಕಳಾದಳು. ಎಲ್ಲಿ ಕುರಿ, ಕೋಳಿ ಬಲಿ ಕೊಡುತ್ತಿದ್ದರೋ, ರಕ್ತ ಚರಗ ಚೆಲ್ಲಿ ಹಬ್ಬ ಮಾಡುತ್ತಿದ್ದರೋ ಅಲ್ಲಲ್ಲಿ ಬ್ಯಾಂಕ್, ಎ.ಟಿ.ಎಂ., ಡಿಜಿಟಲ್ ಸೆಂಟರ್, ಹೊಸ ಮಾಲ್‌ಗಳು ಇವುಗಳ ಜೊತೆಯಲ್ಲಿಯೇ ತನ್ನ ಹಿಂದಿನ ಪರಿವಾರದ ಬೀಗ ರಿಪೇರಿ, ಕೊಡೆ ರಿಪೇರಿ, ಚಪ್ಪಲಿ ಹೊಲಿಯುವರು, ಸೂಜಿ, ಹೇರಪಿನ್, ದಾರ, ಮುಳ್ಳಾಗಡ್ಡಿ, ಕೂಕಣಿ ತೆಗೆಯೋರು, ಮಿಠಾಯಿ, ಬಲೂನ ಮಾರೋರು, ಬಳೀ ಮಾರೋರು, ಸಣ್ಣ ಸಣ್ಣ ಅಂಗಡಿ, ಹೊಟೇಲ್‌ಗಳು, ಸಿನಿಮಾ, ನಾಟಕ ತೋರಿಸುವವರು ಹೀಗೆ ಹತ್ತಾರು ಸಂಗತಿಗಳು ಇಲ್ಲಿ ಕೂಡಿದರೆ ಹೇಗೆ ಅಂತಾ ಬಹುತ್ವದ ಯೋಚನೆ ಮಾಡಿದಳು. ಗಾಂಧೀ ಕನಸನ್ನು ನನಸು ಮಾಡಬಹುದಲ್ಲಾಂತ ಒಂದು ಸಣ್ಣ ಆಸೆ ಇಲ್ಲಿ ಮೂಡಿ ನಿಂತಿತು.



ಬಾಳನ್ನು ಅಪ್‌ಡೇಟ್ ಮಾಡಲು ಹಂಬಲಿಸುವ ಅವಳ ಮನಸ್ಥಿತಿ ಭಕ್ತರದೂ ಇದ್ದಂತಿತ್ತು. ಆರಳೀಕಟ್ಟಿ ಮ್ಯಾಲೆ ಕಾಲಿಪೀಲಿ ಜನರ ಜೊತೆ, ನಾಯಿ- ಬೆಕ್ಕುಗಳ ಜೊತೆ ವಾಸಿಸುವದಕ್ಕಿಂತ ಒಳ್ಳೆಯ ಗ್ರೀನ್ ಗಾರ್ಡನ್‌ನಲ್ಲಿ ಇದ್ದರೆ ಹೇಗಿರುತ್ತೆ ಎಂಬ ಭಾವನೆ ಅವಳಲ್ಲಿ ಸುಳಿಯಿತು. ಹೊಸ ಹೊಸ ಭಕ್ತರು ಹೊಸ ಕನಸು, ಅಭಿಲಾಷೆಗಳು ಇಲ್ಲಿ ಮೂಡುವುದಕ್ಕೆ ಅವಳು ಸಜ್ಜಾಗಿದ್ದಳು. ಹಾಗಂತಲೇ ಅವಳು ಕಿಡಿಗೇಡಿ ರಾಮಣ್ಣನಿಗೆ ಗೊತ್ತಾಗದ ಹಾಗೆ ಒಂದು ಫೇಸ್‌ಬುಕ್ ಅಕೌಂಟ್ ಓಪನ್ ಮಾಡಿದ್ದಳು. ವಾಟ್ಸಾಪ್ ಗ್ರೂಪೂ ಮಾಡಿದ್ದಳು. ಇನ್‌ಸ್ಟಾಗ್ರಾಂ ತೆರೆದಿದ್ದಳು. ಅವಳಿಗೆ ಟ್ವಿಟರ್, ಜೂಮು, ಗೂಗಲ್ಮೀಟು, ಮೇಟಾ ಗೀಟಾ ಎಲ್ಲಾ ತಿಳಿದಿತ್ತು. ಅವಳದೇ ಆದ ಜೀಮೇಲೂ ಇತ್ತು. ಅದು ಈಗ ಚಾಲೂ ಆಯ್ತು.

ಆಹಾ...'smartcitymaremma@gmail.com' ಶುರುವಾಯ್ತು. ಮಾರೆಮ್ಮನ ತಲೇಲಿ ಅದೇನು ಹೊಕ್ಕಿತೋ ಏನೋ, ಸಡನ್ನಾಗಿ ಮತ್ತೆ ಹಿಂದಿನಂತೆ ಇಲ್ಲಿಂದಲೇ ದೆಹಲಿಯ ರಾಜಕೀಯ ಶುರು ಮಾಡ್ತೀನಿ ಅಂದುಬಿಟ್ಟಳು! ಮೋದಿಯವರ ಪ್ಲಾನ್ ಗುಂಗಾಡಿ ಹುಳ ಹೊಕ್ಕು ತಳ ಕೊರೆದ ಹಾಗೆ ಅವಳಲ್ಲಿ ಒಂದು ದೊಡ್ಡ ಬದಲಾವಣೆಯ ಗಾಳಿ ಬೀಸಾಕ ಹತ್ತಿತ್ತು. ಭಕ್ತರು ಬೆಕ್ಕಸ ಬೆರಗಾಗಿ ಬದಲಾಗುತ್ತಿರುವ ಮಾರೆಮ್ಮನ ಸ್ಟೈಲ್ ಕಂಡು ತಮ್ಮ ತಮ್ಮ ಪ್ರಸಾದಗಳ ಪರಸ್ಪರ ಹಂಚಿಕೊಂಡು 'ಕಾಲೈ ತಸ್ಮೈ ನಮಃ' ಅಂತಾ ತಮ್ಮ ತಮ್ಮ ಮನೆಗಳಿಗೆ ಬಂದು ಸೇರಿಕೊಂಡರು. ಪೂಜಾರಿ ನಾಗಣ್ಣನೂ ತನ್ನ ಮಾರೆಮ್ಮನ ಗುಡಿಯ ಕದ ಮುಂದಕ್ಕ ಎಳೆದುಕೊಂಡು, ಪರದಿ ಸರಿಮಾಡಿಕೊಂಡು, ತಾನುಟ್ಟರುವ ಪಂಚೆ, ಜುಬ್ಬಾ, ಟವಲ್ ತೀಡಿಕೊಂಡು, ಹರಡಿದ್ದ ಕೂದಲು ಸುರುಳಿಯಾಗಿ ಸುತ್ತಿಕೊಂಡು, ಹೊರಗೆ ಬಿಟ್ಟಿದ್ದ ಪ್ಯಾರಾಗನ್ ಚಪ್ಪಲಿ ಹಾಕಿಕೊಂಡು ಬಾಗಿಲ ಗೇಟಿಗೆ ಗೋದ್ರೆಜ್ ಕೀ ಹಾಕಿ ಅದನ್ನು ತನ್ನ ಉಡುದಾರದಲ್ಲಿ ಏರಿಸಿಕೊಳ್ಳುತ್ತಾ ಗಣೇಶಬೀಡಿ ಕಟ್ಟನ್ನು ಸಾವರಿಸಿಕೊಂಡು ಮುಟ್ಟುತ್ತಾ ಬಂದು ತನ್ನ ಸಂಸಾರ ಖಚಿತ ಮನೆ ಸೇರ್ಕೊಂಡ.

ಇತ್ತ ಕಿಡಿಗೇಡಿ ರಾಮಣ್ಣನು ಆರಳೀಕಟ್ಟೆಯ ಚಾವೀ ಮನೆಯನ್ನು ಅಲ್ಲಿಯೇ ಬಿಟ್ಟು ಅರಳೀಮರದ ಪೊಟರೆಯೊಂದರಲ್ಲಿ ಹುಣಸೇಬೀಜ, ಹರಳು, ಕವಡೆಯ ಚೀಲವನ್ನಿರಿಸಿ ತನ್ನ ರುಮಾಲಿನಿಂದೊಮ್ಮೆ ಅರಳೀಕಟ್ಟೆಯ ಧೂಳನ್ನು ಝಾಡಿಸಿ ಮನೆಯತ್ತಾ ಹೆಜ್ಜೆ ಹಾಕಿದ. ಆತನ ಜತೆ, ಆತನ ಪರಿವಾರವೂ ನಡೆದುಹೋಯಿತು. ಇತ್ತ ರಾತ್ರಿಯಾಗುತ್ತಿದ್ದುದರಿಂದ ಊರ ಹೊಲದಲ್ಲಿ ಮೇಯಲು ಹೋಗಿದ್ದ ಊರ ಗೂಳಿಗಳು, ದೇವರ ಮರಿಕೋಣಗಳು, ಮಾರೆಮ್ಮನ ಗುಡಿಯ ಪ್ರಾಂಗಣದಲ್ಲಿ ನಿಂತು ಏನೋ ಧ್ಯಾನಿಸಿದಂತೆ ಕುಳಿತು ಮೆಲುಕು ಹಾಕುತ್ತಾ ಮಲಗಿಕೊಳ್ಳಲು ಸಿದ್ಧತೆ ಮಾಡಿಕೊಂಡವು. ಎಲ್ಲೋ ನಾಯಿಗಳು ಬೊಗಳಿ ಸುಮ್ಮನಾದವು. ಊರು ಸ್ತಬ್ಧವಾಯ್ತು. ಮತ್ತೆ ನಾಳೆಗೆ ಎಂದಿನಂತೆ ಅರಳಿಕೊಳ್ಳಲು.

●